ದಿಃ 26.06.2025

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀಮತಿ ಎಂ.ಸಿ.ಎಂ ಆರೋಪಿಯ ಪರ ವಕೀಲರಿಂದ

ನಮ್ಮ ಜಮೀನು ಹಾಗೂ ಆರೋಪಿಯ ಜಮೀನು ಅಕ್ಕಪಕ್ಕ ಇದೆ ಎಂದರೆ ಸರಿ. ನಮ್ಮ ಸ.ನಂ 135/8 ಆಗಿರುತ್ತದೆ. ಸದರಿ ಕೇಸ್ ದಾಖಲಾಗುವ ಮೊದಲು, ಜಮೀನಿನ ವಿಚಾರವಾಗಿ ನಮ್ಮ ನಡುವೆ ಗಲಾಟೆಯಾಗಿತ್ತು ಎಂದರೆ ಸರಿ. ಹಿಂದಿನ ಗಲಾಟೆಯಲ್ಲೂ ಆರೋಪಿತರಿಗೆ ನಾನೇ ಹಲ್ಲೇ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ವ್ಯವಸಾಯ ಹಾಗೂ ದೇವಸ್ಥಾನದಲ್ಲಿ ಪೂಜೆ ಮಾಡಿ ಶಾಸ್ತ್ರವನ್ನು ಹೇಳುತ್ತೇನೆ. ನಾನು ವಾಮಚಾರವಾಗಿ ಪೂಜೆ ಮಾಡಿ ನಿಂಬೆಹಣ್ಣುಗಳನ್ನು ಆರೋಪಿತರ ಜಮೀನಿಗೆ ಹಾಕುತ್ತಿದ್ದೇನು ಎಂದರೆ ಸರಿಯಲ್ಲ. ಗಲಾಟೆ ನಡೆಯುವಾಗ ನಾನು, ನನ್ನ ಹೆಂಡತಿ ಹಾಗೂ ಕಲ್ಲೇಶ್ ಎನ್ನುವವರು ಇದ್ದೇವು, ಮಂಜೇಗೌಡರು ಜಗಳ ಆದಾ ನಂತರ ಬಂದಿರುತ್ತಾರೆ.

ನಾನು ನನ್ನ ಜಮೀನಿಗೆ ಹಲವಾರು ಬಾರಿ ಸರ್ವೆ ಮಾಡಿಸಿದ್ದೇನೆ ಎಂದರೆ ಸರಿ. ಸರ್ವೆ ಮಾಡಿಸುವ ಸಮಯದಲ್ಲಿ ನೋಟಿಸ್ಸ್ ನ್ನು ಅಕ್ಕ ಪಕ್ಕದವರಿಗೆ ನೀಡಿರುತ್ತೇನೆ. ಯಾವುದೇ ನೋಟಿಸ್ಸ್ ಕೊಡದೇ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ತಮ್ಮ ಜಮೀನಿಗೆ ಹೋಗದಂತೆ ತಂತಿ ಬೇಲಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಊರಿನ ಪಕ್ಕ ಉದಯಪುರದಲ್ಲಿ ಸಹ ಆಸ್ಪತ್ರೆ ಇದೆ ಎಂದರೆ ಸರಿ. ನಾನು ಆ ಆಸ್ಪತ್ರೆಗೆ ಹೋಗದೇ ಚನ್ನರಾಯಪಟ್ಟಣದ ಆಸ್ಪತ್ರಗೆ ಬಂದಿರುತ್ತೇನೆ ಎಂದರೆ ಸರಿ. ನನಗೆ ಮೂಗಿನ ಏಟಾಗಿದ್ದು ಸ್ಕ್ಯಾನ್ ಮಾಡಿಸಿರುತ್ತೇನೆ. ನಮ್ಮ ಊರಿನಿಂದ ಆಟೋದಲ್ಲಿ ಸುಬ್ರಮಣ್ಯ, ಮಂಜೇಗೌಡ ರವರು ಕರೆದುಕೊಂಡುಬಂದಿರುತ್ತಾರೆ. ಸದರಿಯವರು ನನ್ನನ್ನು ಕರೆದಕೊಂಡು ಒಂದೇ ಆಟೋದಲ್ಲಿ ಬಂದಿರುತ್ತಾರೆ. ಗಲಾಟೆ 7.00 ರಿಂದ 7.30ವರಿಗೂ ನಡೆದಿರುತ್ತದೆ. ಆಸ್ಪತ್ರೆಗೆ 9.00ಗಂಟೆಗೆ ಬಂದು ಒಳರೋಗಿಯಾಗಿರುತ್ತೇನೆ. ಆರೋಪಿತರು ಸಹ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ಸಾಕ್ಷಿಯು ನಾನು ಬರುವ ಮೊದಲೇ ನನ್ನ ಮೇಲೆ ದೂರು ಕೊಡುವ ಉದ್ದೇಶದಿಂದ ಆಸ್ಪತ್ರೆಯಲ್ಲಿ

ದಿಃ 26.06.2025

ದಾಖಲಾಗಿದ್ದರು ಎಂದು ನುಡಿಯುತ್ತಾರೆ. ಇಬ್ಬರೂ ಪೋಲಿಸ್ ರವರು ಆಸ್ಪತ್ರೆಗೆ ಬೆ 9.30 ರಿಂದ 10.00 ಗಂಟೆಗೆ ಬಂದಿರುತ್ತಾರೆ. ದೂರನ್ನು ಆಸ್ಪತ್ರೆಯಲ್ಲಿ ಪೋಲಿಸ್ ಗೆ ನೀಡಿರುತ್ತೇನೆ, ಅದನ್ನು ಅವರೇ ಬರೆದುಕೊಂಡಿರುತ್ತಾರೆ.

ಮರುಹೇಳಿಕೆಯನ್ನು ಗಲಾಟೆಯಾದ ನಾಲ್ಕು ದಿನಗಳ ನಂತರ ನೀಡಿರುತ್ತೇನೆ. 2 ದಿನ ಒಳರೋಗಿಯಾಗಿ ದಾಖಲಾಗಿದ್ದೆ. ದಿಃ 24.06.2020 ರ ಸಂಜೆ 6.00ಗಂಟೆಗೆ ಆಸ್ಪತ್ರೆಯಿಂದ ಬಿಡುಗಡೆ ಆಗಿರುತ್ತೇನೆ. ದಿಃ 26.06.2020 ರಂದು ನಾನು ಹೇಳಿಕೆ ನೀಡಿರುತ್ತೇನೆ. ಪೋಲಿಸ್ ರವರು ಮಹಜರ್ ನ್ನು ಮಾಡಲು ನಾನು ಮರುಹೇಳಿಕೆ ನೀಡಿದ ದಿನವೇ ಬಂದಿರುತ್ತಾರೆ.

ಶಾಸ್ತ್ರ ಮಾಡುವ ವಿಚಾರವಾಗಿ ಹಾಗೂ ಆರೋಪಿತರಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿಕೊಂಡು ನಾನೇ ಗಲಾಟೆ ಮಾಡಿ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮೂಗಿಗೆ ಹೊಡೆದಿರುವುದಿಲ್ಲ, ನಾನೇ ಆರೋಪಿತರಿಗೆ ಹಲ್ಲೆ ಮಾಡಲು ಹೋದಾಗ ನನ್ನ ಕೈಗೆ, ಮೂಗಿಗೆ ಹೊಡೆದು ಗಾಯ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮನೆಯಲ್ಲಿ ಸಿಸಿ ಟಿವಿ ಇದೆ ಎಂದು ಪೋಲಿಸಿ ಗೆ ಹೇಳಿರುವುದಿಲ್ಲ. 3ನೇ ಆರೋಪಯು ನನ್ನ ಜಮೀನನ್ನು ಏಕೆ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಕೇಳಲು ಬಂದಾಗ ನನ್ನ ಹೆಂಡತಿ ಅವರಿಗೆ ಪೂರಕೆಯಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ 1ನೇ ಆರೋಪಿಯು ಜಗಳ ಬಿಡಿಸಲು ಬಂದಾಗ ಅವರಿಗೆ ನಾನೇ ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಿಸಿ ಟಿವಿ ಪೂಟೇಜ್ ನ್ನು ಪೋಲಿಸ್ ರವರಿಗೆ ನೀಡಿರುವುದಿಲ್ಲ. ನಾವೇ ಆರೋಪಿತರಿಗೆ ಹಲ್ಲೆ ಮಾಡಿರುವುರಿಂದ ಸಿಸಿ ಟಿವಿ ಪೂಟೇಜ್ ನ್ನು ಪೋಲಿಸ್ ರವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಗಲಾಟೆಯಾಗದಿದ್ದರೂ ಜಮೀನಿನ ವಿಚಾರವಾಗಿ ಆರೋಪಿತರಿಗೆ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಿರುದ್ದ ಆರೋಪಿತರು ದೂರು ನೀಡಿದ್ದು ಸಿಸಿ 790/2020 ಆಗಿದ್ದು ಅದರಲ್ಲಿ ಈ ನ್ಯಾಯಾಲಯಕ್ಕೆ ಹಾಜರು ಆಗುತ್ತಿದ್ದೇನೇ ಎಂದರೆ ಸರಿ, ಆದಾ ಕಾರಣ ಆರೋಪಿತರು ಯಾವುದೇ ಗಲಾಟೆ ಮಾಡಿಲ್ಲ, ಅವ್ಯಾಚ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ.

ದಿಃ 26.06.2025

<u>ಮರುವಿಚಾರಣೆಃ ಇಲ್ಲ</u>

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ 26.06.2025